2) ಇಲಾಖಾಧಿಕಾರಿಗಳಿಂದ ಈ ಸಂಘಗಳ ಸದರಿ ನ್ಯೂನತೆಗಳ ಬಗ್ಗೆ ಪುನರ್ ಪರಿಶೀಲನೆ ನಡೆಸಲಾಗಿದೆ.

3) ಪುನರ್ ಪರಿಶೀಲನಾ ವರದಿಯಲ್ಲಿ ತಿಳಿಸಿರುವ ನ್ಯೂನತೆಗಳನ್ನು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಈ ವರದಿ ಮೇಲೆ ಸದರಿ ಸಂಘಗಳು ಭೂಸ್ವಾಧೀನ ಮಾಡಿಕೊಳ್ಳುವಲ್ಲಿ ಮಾಡಿರುವ ಅವ್ಯವಹಾರಗಳನ್ನು ಕಂದಾಯ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸರ್ಕಾರದಿಂದ ತಿಳಿಸಲಾಗಿದೆ.

4) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 30 ಬಿ.ಪ್ರಕಾರ ಗೃಹ ನಿರ್ಮಾಣ ಸಹಕಾರ ಸಂಘಗಳು ತನ್ನ ಸದಸ್ಯರುಗಳಿಗೆ ನಿವೇಶಗಳನ್ನು ಹಂಚಬಾರದೆಂದು ನಿರ್ದೇಶನ ನೀಡಲಾಗಿದೆ.

5) ವಿಚಾರಣೆಗೆ ಸಂಬಂಧಿಸಿದಂತೆ ಸಂಘದ ಸಮಸ್ಯೆಗಳನ್ನು ಅಧ್ಯಯನ ನಡೆಸಲು ಸರ್ಕಾರವು ಈ ಬಗ್ಗೆ ಮಂತ್ರಿ ಮಂಡಲದ ಉಪ ಸಮಿತಿಯನ್ನು ರಚಿಸಿದೆ.

6) ಈ ವರದಿಯ ಆಧಾರದ ಮೇಲೆ ಎರಡು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ. ಇತರೆ ವರದಿಯ ಆಧಾರದ ಮೇಲೆ 4 ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಹರಪನಹಳ್ಳಿಯಲ್ಲಿ ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಸ್ಥಾಪಿಸುವ ಬಗ್ಗೆ.

2798 - ಶ್ರೀ ಬಿ.ಹೆಚ್. ಯಂಕಾನಾಯಕ್ (ಹರಪನಹಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ಭಾಗದ ಬಹುದಿನಗಳ ಬೇಡಿಕೆಯಾದ ಕಾರ್ಯ ನಿರ್ವಾಹಕ ಅಭಿಯಂತರ (ವಿ) ರವರ ಕಛೇರಿಯನ್ನು ಹರಪನಹಳ್ಳಿಯಲ್ಲಿ ಸ್ಥಾಪಿಸುವ ವಿಷಯ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಅಲ್ಲಿ ಶೀಘ್ರವಾಗಿ ಸ್ಥಾಪಿಸಲು ಸರ್ಕಾರಕ್ಕಿರುವ ಅಡ್ಡಿ ಆತಂಕಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಇಲ್ಲ

ಆ) ಹಾಲಿ ಬಳ್ಳಾರಿ ಜಿಲ್ಲೆಗೆ ಎರಡು ವಿಭಾಗಗಳಿದ್ದು, ಈ ಜಿಲ್ಲೆಗೆ ಇನ್ನೂ ಒಂದು ವಿಭಾಗವನ್ನು ಮಂಜೂರು ಮಾಡುವ ಅವಶ್ಯಕತೆ ಸದ್ಯಕ್ಕಿರುವುದಿಲ್ಲ.

ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹೆಚ್ಚಿನ ಸ್ಥಾನವೇಶಾವಕಾಶ ನೀಡುವುದರ ಬಗ್ಗೆ

2868 - ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?